**ಅಸಲು ದಾವೆ ಸಂಖ್ಯೆ 16/2017**
**ಪಿ.ಡಬ್ಲ್ಯೂ 01**

**ದಿ:06.01.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 03 ನೇ ಪ್ರತಿವಾದಿ ಪರ ಶ್ರೀ ಎಮ್.ಕೆ.ಪಿ ವಕೀಲರಿಂದಃ**

8. ಕಲಂಗೇರಿ ಗ್ರಾಮದ ಜಮೀನು ಸರ್ವೆ ನಂಬರ್ 104/ಎ ಕ್ಷೇತ್ರ 3 ಎಕರೆ ಮತ್ತು 104/ಎಎ ಕ್ಷೇತ್ರ 3 ಎಕರೆ 28 ಗುಂಟೆ 4 ನೇ ಪ್ರತಿವಾದಿಯ ಸ್ವಾರ್ಯಾರ್ಜಿತ ಆಸ್ತಿಗಳು ಅಂದರೆ ಸರಿಯಲ್ಲ. ಚಿಕ್ಕಬಾದರದಿನ್ನಿ ಗ್ರಾಮದ ಜಮೀನು ಸರ್ವೆ ನಂಬರ್ 36/2 ಕ್ಷೇತ್ರ 7 ಎಕರೆ 14 ಗುಂಟೆ ಜಮೀನು 1 ನೇ ಪ್ರತಿವಾದಿಯ ಹೆಂಡತಿ ಶಾಂತಮ್ಮ ಇವರ ಸ್ವಾರ್ಯಾರ್ಜಿತ ಆಸ್ತಿ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲರು ಕೂಡಿಯೇ ಖರೀದಿಸಿರುತ್ತೇವೆ ಎಂದು ಹೇಳುತ್ತಾರೆ. ಸದರಿ ಆಸ್ತಿ ಶಾಂತಮ್ಮ ಇವರ ತವರುಮನೆಯಿಂದ ಬಂದ ಆಸ್ತಿ ಅಂದರೆ ಸರಿಯಲ್ಲ. ಪಾತರಪೂರು ಗ್ರಾಮದ ಜಮೀನು ಸರ್ವೆ ನಂಬರ್ 3/2 ಕ್ಷೇತ್ರ 2 ಎಕರೆ 24 ಗುಂಟೆ 05 ನೇ ಪ್ರತಿವಾದಿಯ ಹೆಸರಿನಲ್ಲಿ 1 ನೇ ಪ್ರತಿವಾದಿಯ ಎಲ್ಲರು ಒಟ್ಟಿಗೆ ಇದ್ದಾಗ ಖರೀದಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಆಸ್ತಿ 5 ನೇ ಪ್ರತಿವಾದಿಯ ಸ್ವಾರ್ಯಾರ್ಜಿತ ಆಸ್ತಿ ಅಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನನಗೆ ಯಾವುದೇ ಪಾಲು ಇಲ್ಲ ಅಂದರೆ ಸರಿಯಲ್ಲ.

9. ನನ್ನ ತಂದೆ ನಾಗನಗೌಡ ಇವರಿಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ 4 ಜನ ಗಂಡು ಮಕ್ಕಳು. ಹೆಣ್ಣು ಮಕ್ಕಳೆಂದರೆ ಶರಣಮ್ಮ ಇವರು ಮೃತಪಟ್ಟಿರುತ್ತಾರೆ. ಅವರ ಮಕ್ಕಳು ಜೀವಂತ ಇರುತ್ತಾರೆ. ಅವರೆಂದರೆ ಶಿವರೆಡ್ಡಿ, ರಾಚನಗೌಡ, ಶಿವಕಾಂತಮ್ಮ, ರಾಚಮ್ಮ. ನನ್ನ ಇನ್ನೊಬ್ಬ ಸಹೋದರಿ ಹೆಸರು ಬಸಮ್ಮ ಅಂದರೆ 10 ನೇ ಪ್ರತಿವಾದಿ. ನಮ್ಮ ಕುಟುಂಬದ ಆಸ್ತಿಗಳಲ್ಲಿ ಈಗಾಗಲೇ ವಿಭಾಗ ಆಗಿರುತ್ತದೆ ಅಂದರೆ ಸರಿಯಲ್ಲ. ನನ್ನ ಹೆಂಡತಿ ತವರುಮನೆಯವರು 3 ಎಕರೆ 20 ಗುಂಟೆ ಜಮೀನು ನನಗೆ ಕೊಟ್ಟಿದ್ದರು ಹಾಗೂ ನನ್ನ ಸಹೋದರರು ನನಗೆ 7 ಲಕ್ಷ ರೂಪಾಯಿ ಕೊಟ್ಟಿದ್ದರಿಂದ ದಾವ ಆಸ್ತಿಯಲ್ಲಿರುವ ನನ್ನ ಹಕ್ಕನ್ನು ನನ್ನ ಉಳಿದ ಸಹೋದರರಿಗೆ ಬಿಟ್ಟುಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ನಿಪಿ.66 ಯಾವ ಮನೆಗೆ ಸೇರಿದ್ದ ವಿದ್ಯುತ್ ಶಕ್ತಿ ಬಿಲ್ ಅಂದರೆ ಸಾಕ್ಷಿ 5 ನೇ ಪ್ರತಿವಾದಿ ನಿವೇಶನ ಖರೀದಿಸಿ ಕಟ್ಟಿದ ಮನೆ ಎಂದು ಹೇಳುತ್ತಾರೆ. ನಿಪಿ.67 ರಂತೆ ಮನೆಯ ವಿಸ್ತೀರ್ಣ ಎಂದು ನನಗೆ ಗೊತ್ತಿಲ್ಲ. ನಿಪಿ.67 ರ ಮನೆಯಲ್ಲಿ ಒಟ್ಟು 03 ರೂಮ್ ಮತ್ತು ಒಂದು ಹಾಲ್ ಇದೆ. ನಿಪಿ.67 ರ ಆಸ್ತಿ ಪಿತ್ರಾರ್ಜಿತ ಆಸ್ತಿ ಅದರಲ್ಲಿ ನನ್ನ ಸಹೋದರ 1 ನೇ ಪ್ರತಿವಾದಿ ಮಾತ್ರ ವಾಸ ಇದ್ದ ಅಂದರೆ ಸರಿಯಲ್ಲ. ಸದರಿ ಮನೆಯಲ್ಲಿ ಇತರೆ ನನ್ನ ಸಹೋದರರು ವಾಸ ಇರಲಿಲ್ಲ ಅಂದರೆ ಸರಿಯಲ್ಲ. ನಾನು ಮನೆಯಲ್ಲಿ ಪಾಲು ಕೋಡುವಂತೆ ಪ್ರತಿವಾದಿಯರಿಗೆ ಕೇಳಿದ್ದೆನು. ಪ್ರತಿವಾದಿಯರು ಮನೆಯಲ್ಲಿ ಪಾಲು ಕೋಡುತ್ತಾರೆ ಎಂಬ ಉದ್ದೇಶದಿಂದ

ಮೊದಲು ಪ್ರಕರಣ ದಾಖಲಿಸಿಲ್ಲ. ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಶ್ರೀ ಕೆ.ಎಸ್.ಆರ್ ವಕೀಲರು ಮಾಡಿದ ಪಾಟೀ ಸವಾಲನ್ನು ಶ್ರೀ ಎಮ್.ಕೆ.ಪಿ ವಕೀಲರು ಹಾಗೂ 10ನೇ ಪ್ರತಿವಾದಿ ಪರ ಶ್ರೀ ಜೆ.ಹೆಚ್.ಎನ್ ವಕೀಲರು ಅಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆಃ ಇಲ್ಲ**

**(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)**
**ಓ.ಹೇ.ಕೆ.ಸರಿ ಇದೆ**

**ಪ್ರ.ದ.ನ್ಯಾದಂ.ಗಳು, ಮಾನ್ವಿ**